# ಭಜನಾ ಕಾರ್ಯಾಗಾರ

## ಸುತ್ತೂರು ಶ್ರೀಕ್ಷೇತ್ರ

## 2-6 ಆಗಸ್ಟ್ 2026






**ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ**

ಸುತ್ತೂರು ಶ್ರೀಕ್ಷೇತ್ರ

**ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ**

**ಜೆಎಸ್ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆಯುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಕಳೆದ 40 ವರ್ಷಗಳಿಂದಲೂ ರಾಜ್ಯ ಮಟ್ಟದ ಭಜನಾ ಮೇಳವನ್ನು ಏರ್ಪಡಿಸಲಾಗುತ್ತಿದೆ. ಭಜನಾ ತಂಡಗಳಿಗೆ ಇದರಿಂದ ಪ್ರೋತ್ಸಾಹ ದೊರೆಯುತ್ತಿದೆ. ಭಜನಾ ಮೇಳದಲ್ಲಿ ರಾಜ್ಯದ ಎಲ್ಲ ಭಾಗಗಳಿಂದ ಹಾಗೂ ಹೊರರಾಜ್ಯಗಳ ಕೆಲವು ಕಡೆಗಳಿಂದ ಭಜನಾ ತಂಡಗಳವರು ಬಂದು ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ.

ಭಜನಾ ಮೇಳದಲ್ಲಿ ಭಾಗವಹಿಸುವ ತಂಡಗಳ ಅನುಕೂಲಕ್ಕಾಗಿ, ಅವರ ಹಾಡುಗಾರಿಕೆಯಲ್ಲಿ ಶ್ರುತಿ, ರಾಗ, ತಾಳ, ಭಾವ ಹಾಗೂ ಪಠ್ಯಗಳ ಉತ್ತಮೀಕರಣಕ್ಕಾಗಿ ಕಾರ್ಯಾಗಾರವನ್ನು ಏರ್ಪಡಿಸಿ, ತಜ್ಞರಿಂದ ಸೂಕ್ತ ಮಾರ್ಗದರ್ಶನ ನೀಡಿ, ಹಾಡುಗಾರಿಕೆಯಲ್ಲಿ ಸುಧಾರಣೆಗೆ ಅವಕಾಶ ಮಾಡಿಕೊಡಲು, 2009 ರಿಂದ ಇದುವರೆಗೆ ಆರು ಕಾರ್ಯಾಗಾರಗಳು ನೆರವೇರಿವೆ.

ಈ ವರ್ಷ ಐದು ದಿನಗಳ ಭಜನಾ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ. ಭಜನಾ ತಂಡಗಳವರಿಗೆ ಹಾಡುಗಾರಿಕೆ ಮತ್ತು ಭಜನಾ ಕುಣಿತಗಳ ಬಗ್ಗೆ ವಿದ್ವಾಂಸರುಗಳು ತರಬೇತಿ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ. ಇದರ ಜೊತೆಗೆ, ಯೋಗ ಹಾಗೂ ಭಜನಾ ಪ್ರಾತ್ಯಕ್ಷಿಕೆಗಳೂ ಇರುತ್ತವೆ. ರಾಜ್ಯದ ಎಲ್ಲ ಜಿಲ್ಲೆಗಳ ಪುರುಷ ಮತ್ತು ಮಹಿಳಾ ಭಜನಾ ತಂಡಗಳವರು ಭಾಗವಹಿಸಲು ಅವಕಾಶವಿದೆ. ಆಸಕ್ತ ತಂಡಗಳವರು ಈ ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಳ್ಳಬಹುದಾಗಿದೆ.

ಮೊದಲು ಸಂಪರ್ಕಿಸುವವರಿಗೆ ಆದ್ಯತೆ ಮೇಲೆ ಅವಕಾಶ ನೀಡಲಾಗುವುದು. ವಿಳಂಬವಾಗಿ ಸಂಪರ್ಕಿಸುವವರಿಗೆ ಮುಂದೆ ಏರ್ಪಡಿಸುವ ಕಾರ್ಯಾಗಾರಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುವುದು.

## ಸೂಚನೆಗಳು

* ಪ್ರತಿ ತಂಡದಿಂದ 4 ರಿಂದ 5 ಮಂದಿ ಸದಸ್ಯರು ಭಾಗವಹಿಸಬಹುದು.
* ಸದಸ್ಯರು 15 ವರ್ಷ ಮೇಲ್ಪಟ್ಟ ವಯಸ್ಸಿನವರಾಗಿರಬೇಕು.
* ತಂಡವಿಲ್ಲದ ಕಡೆಗಳಲ್ಲಿ, ಭಜನೆಯಲ್ಲಿ ಆಸಕ್ತಿ ಉಳ್ಳವರೂ ಸಹ ವೈಯಕ್ತಿಕವಾಗಿ ಭಾಗವಹಿಸಬಹುದು.
* ಕಾರ್ಯಾಗಾರದ ಅವಧಿಯಲ್ಲಿ ಎಲ್ಲರೂ ಶ್ರೀಕ್ಷೇತ್ರದಲ್ಲೇ ಇರಬೇಕು.
* ಶಿಸ್ತು ಮತ್ತು ಸಮಯಪಾಲನೆ ಕಡ್ಡಾಯ.
* ದಿನನಿತ್ಯದ ಉಡುಪುಗಳು ಹಾಗೂ ಅಗತ್ಯ ಔಷಧಿಗಳನ್ನು ತರಬೇಕು.
* ಶ್ರೀಕ್ಷೇತ್ರದಲ್ಲಿ ಉಚಿತ ಊಟ, ವಸತಿಗೆ ವ್ಯವಸ್ಥೆ ಮಾಡಲಾಗುತ್ತದೆ.
* ತಂಡಗಳಿಗೆ ಬಸ್ಸು/ರೈಲಿನಲ್ಲಿ ಬಂದು-ಹೋಗಲು ಸಾಮಾನ್ಯ ದರ್ಜೆಯ ಪ್ರಯಾಣಭತ್ಯೆ ನೀಡಲಾಗುವುದು.
* ಭರ್ತಿ ಮಾಡಿದ ಅರ್ಜಿಯನ್ನು 25 ಜುಲೈ 2026ರೊಳಗೆ ಕೆಳಕಂಡ ವಿಳಾಸಕ್ಕೆ ಕಳುಹಿಸುವುದು.
* ನೋಂದಾಯಿಸಿಕೊಂಡಿರುವವರು 1 ಆಗಸ್ಟ್ 2026 ರಂದು ಸಂಜೆ 6 ಗಂಟೆಯೊಳಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ವರದಿ ಮಾಡಿಕೊಳ್ಳುವುದು.


**ಸಂಪರ್ಕ ವಿಳಾಸ**

**ಶ್ರೀ ಬಿ. ರಾಜೇಶ್ (ಮೊ: 9964141560)**


ಪ್ರಕಟಣ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು

ದೂರವಾಣಿ: 0821-2548212 Extn.: 48/49

ಇ-ಮೇಲ್: jsspublications@gmail.com * ವೆಬ್‌ಸೈಟ್: www.jssonline.org








**ಹೆಚ್ಚಿನ ಮಾಹಿತಿಗಾಗಿ ಸಂಚಾಲಕರುಗಳನ್ನು ಸಂಪರ್ಕಿಸಬಹುದು**

| | | |
|---|---|---|
| ಪ್ರೊ. ಡಿ.ಎಸ್. ಸದಾಶಿವಮೂರ್ತಿ | – | 96110 65982 |
| ಶ್ರೀ ಎ.ಎಂ. ಶಿವಕುಮಾರಸ್ವಾಮಿ | – | 96864 62463 |
| ಡಾ. ಡಿ.ಎಂ. ಮಹೇಂದ್ರಮೂರ್ತಿ | – | 99802 24546 |
| ಶ್ರೀ ಆರ್.ಎಸ್. ಕುಮಾರ್ | – | 90086 50264 |
| ಶ್ರೀಮತಿ ಡಿ.ಎಂ. ಚಿನ್ನಮ್ಮ | – | 96206 49324 |
| ಶ್ರೀಮತಿ ಎಸ್. ಸವಿತ | – | 74117 88567 |
| ಶ್ರೀ ಬಿ. ರಾಜೇಶ್ | – | 99641 41560 |

## ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ

## ಸುತ್ತೂರು ಶ್ರೀಕ್ಷೇತ್ರ

# ಭಜನಾ ಕಾರ್ಯಾಗಾರ

## 2–6 ಆಗಸ್ಟ್ 2026

1. ತಂಡದ ಮುಖ್ಯಸ್ಥರ ಹೆಸರು, ಪೂರ್ಣ ವಿಳಾಸ, ದೂರವಾಣಿ ಮತ್ತಿತರ ವಿವರಗಳು

2. ತಂಡದ ಸದಸ್ಯರ ಹೆಸರುಗಳು

i)

ii)

iii)

iv)

v)

3. ಈ ಹಿಂದೆ ಸುತ್ತೂರು ಶ್ರೀಕ್ಷೇತ್ರ ಅಥವಾ ಬೇರೆಡೆಗಳಲ್ಲಿ ನಡೆದ ಭಜನಾ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದರೆ ಎಲ್ಲಿ, ಎಷ್ಟು ಬಾರಿ ಮುಂತಾದ ವಿವರಗಳು

ಕಾರ್ಯಾಗಾರದ ಸೂಚನೆಗಳಿಗೆ ಬದ್ಧರಾಗಿ ಭಾಗವಹಿಸಲು ಒಪ್ಪಿರುತ್ತೇವೆ.

ದಿನಾಂಕ :

ಸಹಿ